ಕೊಣಂದೂರಿನಲ್ಲಿ ಜಿಲ್ಲಾ ಪರಿಷತ್ ಸದಸ್ಯರ ಮೇಲೆ ಹಲ್ಲೆ

೧೭೭. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ತೀರ್ಥಹಳ್ಳಿ ತಾ., ಕೊಣಂದೂರ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಜಿಲ್ಲಾ ಪರಿಷತ್ ಸದಸ್ಯರ ಮೇಲೆ ಹಲ್ಲೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨) ಹಾಗಿದ್ದಲ್ಲಿ, ಈ ವೈದ್ಯಾಧಿಕಾರಿಯ ಮೇಲೆ ತೆಗೆದುಕೊಂಡ ಕ್ರಮಗಳೇನು ?

ಶ್ರೀಮತಿ ಪದ್ಮನೋರಮ ಮಾಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

೧) ಬಂದಿದೆ.

೨) ಈ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಶಿವಮೊಗ್ಗ ಇವರಿಂದ ವರದಿ ಬಂದಿರುವುದಿಲ್ಲ. ವರದಿ ಬಂದ ನಂತರ ಕ್ರಮಕೈಗೊಳ್ಳಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷಣಿಯವರೆ, ಇದು ಇಡೀ ನಮ್ಮ ಸದನದ ಎಲ್ಲ ಸದಸ್ಯರು ಗಮನಿಸಬೇಕಾದಂಥ ಅಪಮಾನಕರವಾದಂಥ ಘಟನೆ ಆಗಿದೆ ಕೊಣಂದೂರಿನಲ್ಲಿ ಬಂದ ಮಂಗನ ಖಾಯಿಲೆ ಸಂಬಂಧದಲ್ಲಿ ಆಲ್ಲಿರುವಂಥ ಜಿಲ್ಲೆಯ ಆರೋಗ್ಯ ಅಧಿಕಾರಿ ಜೊತೆಗೆ ಜ್ಞಾನೇಂದ್ರ ಎನ್ನುವಂಥ ಜಿಲ್ಲಾಪರಿಷತ್ ಸದಸ್ಯ ಅಲ್ಲಿ ಅನೇಕ ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ, ಅವರ ಬಗ್ಗೆ ಸರಿಯಾದಂಥ ಶುಶ್ರೂಷೆ ಹಾಗೂ ಔಷಧಿ ಒದಗಿಸಿಕೊಡಬೇಕು ಎಂದು ಮಾತನಾಡುತ್ತಿರಬೇಕಾದರೆ ಉನ್ನತ ಅಧಿಕಾರಿಗಳ ಎದುರುಗಡೆ ಒಬ್ಬ ವೈದ್ಯಾಧಿಕಾರಿ ದೇವದಾಸ್ ಎನ್ನುವವರು ಸ್ಟೂಲ್ ತೆಗೆದುಕೊಂಡು ಅವರಿಗೆ ಹೊಡೆದಿದ್ದಾರೆ. ನಂತರ ಅವರ ತಲೆ ಹೊಡೆದು ಪ್ರಾಣಾಪಾಯವಾಗಿ ಆಸ್ಪತ್ರೆಯನ್ನು ಸೇರಿದರು. ಈ ಒಬ್ಬ ಅಧಿಕಾರಿ ಬಗ್ಗೆ, ಇದಕ್ಕೆ ಮಂಚಿ ಜಿಲ್ಲಾಪರಿಷತ್‌ನಲ್ಲಿ ಇಪರೀತಿ ನೀತಿ ನಡವಳಿಕೆ ಸರಿಯಿಲ್ಲ ಎಂದು ಹೇಳಿ ಸರ್ವಾನುಮತದಿಂದ ನಿರ್ಣಯ ಮಾಡಲಾಗಿದೆ. ಅವನ ತಂದೆಯನ್ನೇ ಕೊಲೆ ಮಾಡಲಿಕ್ಕೆ ಪಿಸ್ತೂಲು ತೆಗೆದುಕೊಂಡು ಗುಂಡು ಹಾರಿಸಿದಂಥ ಪ್ರಕರಣ ನಡೆದಿದೆ, ಇಂತಹ ವಿಷಯದ ಬಗ್ಗೆ ಇನ್ನೂ ನವೀಗೆ ವರದಿ ಬಂದಿಲ್ಲ ಎಂದು ಹೇಳಿದ್ದೀರಿ. ಘಟನೆ ನಡೆದಿರುವುದು ನಿಜ ಎಂದು ಉತ್ತರ ಕೊಟ್ಟಿದ್ದೀರಿ. ಎಲ್ಲರ ಪರವಾಗಿ ಅತ್ಯಂತ ವಿನಯದಿಂದ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಸತ್ಯ ಎಂದು ಕಂಡು ಬಂದರೆ ಚುನಾಯಿತ ಪ್ರತಿನಿಧಿಗೆ ಅಪಮಾನವಾಗಿದೆ ಎಂದು ಪ್ರೂವ್ ಆದರೆ ಅವನನ್ನು ಡಿಸ್‌ಮಿಸ್ ಮಾಡಿ. ಈ ತರಹ ಪ್ರಯತ್ನ ಬೇರೆ ಯಾವುದೇ ಅಧಿಕಾರಿ ಮಾಡದ ಹಾಗೆ ಸರಿಯಾದಂಥ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀಮತಿ ಪದ್ಮನೋರಮ ಮಾಧ್ವರಾಜ್.—ಮಾನ್ಯ ಉಪಾಧ್ಯಕ್ಷಣಿಯಂವರೆ, ತನಿಖೆಯಲ್ಲಿ ಆತ ತಪ್ಪಿತಸ್ಥ ಎಂದು ಕಂಡು ಬಂದರೆ ಡಿಸ್‌ಮಿಸ್ ಮಾಡಲಿಕ್ಕೆ ನಾವು ಖಂಡಿತ ಹೇಸುವುದಿಲ್ಲ,

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಎನ್‌ಕ್ವೈರಿ ಮಾಡಿ ಡಿಸ್‌ಮಿಸ್ ಮಾಡಿ ಇಂತಹ ಒಂದು ಚುನಾಯಿತ ಪ್ರತಿನಿಧಿಗಳ ಮೇಲೆ ನಮ್ಮ ಡಾಕ್ಟರುಗಳು ಹಲ್ಲೆ ಮಾಡುವಂಥ ಧೈರ್ಯ ಮಾಡುವುದು ಮುಂದೆ ತಪ್ಪಬೇಕು. ಅದುವರೆಗೆ ಕಡೇ ಪಕ್ಷ ಈ ಡಾಕ್ಟರನ್ನು ಸಸ್ಪೆಂಡ್‌ನಲ್ಲಿಯಾದರೂ ಇಡಿ. ಏಕೆಂದರೆ, ಉನ್ನತ ಅಧಿಕಾರಿ ಸಮಕ್ಷಮದಲ್ಲಿ ಜಿಲ್ಲಾ ಪರಿಷತ್ ಸದಸ್ಯರ ತಲೆ ಹೊಡೆದಿರುವುದರಿಂದ, ಅವರು ಆಸ್ಪತ್ರೆಯಲ್ಲಿದ್ದಾರೆ, ದಯವಾಡಿ ಇವಿಂಡಿಯೇಟ್ ಆಗಿ ಆ ವೈದ್ಯರನ್ನು ಸಸ್ಪೆನ್‌ಷನ್‌ನಲ್ಲಿಡಲಿಕ್ಕೆ ತಾವು ಆದೇಶ ಕೊಡಬೇಕು.

ಶ್ರೀಮತಿ ಪದ್ಮನೋರಮ ಮಾಧ್ವರಾಜ್.—ಸಸ್ಪೆನ್‌ಷನ್‌ನಲ್ಲಿ ಇಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.